

***

ದಿನಗಳು ಯಾರಿಗೆ ಕಾಯುತ್ತವೆ. ಅವು ಓಡಿದವು. ಅದರ ಪಾಡಿಗೆ ಅವು ಓಡಿದವು.

ಒಂದು ದಿನ – ಸೋಮವಾರ ಎಂದು ನೆನಪು – ಇವರು ಬಂದರು. ಸುಬ್ಬಮ್ಮ ಪಡಸಾಲೆಯಲ್ಲಿ ಅಡಿಕೆ ಕುಟ್ಟುತ್ತಾ ಕೂತಿದ್ದಳು. ನಾನು ಒಳಸಾಲೆಯಲ್ಲಿ ಏನೋ ಕೆಲಸ ಮಾಡುತ್ತಿದ್ದೆ.

ಸುಬ್ಬಮ್ಮನದು ಯಾವತ್ತೂ ಗಟ್ಟಿ ದನಿ.

'ಲೇ ಚಿನ್ನಾ… ಇನ್ನು ಎಷ್ಟ್ ದಿನ ಅಂತ ಹಿಂಗೆ ಹಟ ಹಿಡಿತಿಯೋ?'

ನಾನು ಮೈಯೆಲ್ಲಾ ಕಿವಿಯಾಗಿಸಿಕೊಂಡೆ.

ಇವರು ಕಲ್ಲುಗಂಬದಂತೆ ನಿಂತೇ ಇದ್ದರು.

ಸುಬ್ಬಮ್ಮ ಅದೇ ಮಾತನ್ನು ಮತ್ತೊಮ್ಮೆ ಹಾಕಿದಳು.

ಇವರು, 'ತಪ್ಪಾಯ್ತು ಅಂತ ಒಂದ್ಮಾತು ಕೇಳೋಕೆ ಇವಳಿಗೆ ಹಾಂಕಾರ.'

'ನಾಚ್ಕೆ ಇರಲ್ವೇನೋ ಚಿನ್ನಾ'

'ತಪ್ಪು ಮಾಡುವಾಗ ಎಲ್ಲೋಗಿತ್ತಂತೆ ನೀ ಹೇಳೋ ನಾಚ್ಕೆ?'

'ಲೇ ನಾ ಹೇಳೋದಾ ರವಷ್ಟು ಗ್ನಾನ ಇಟ್ಟು ಕೇಳು. ದಾರಿ ಮ್ಯಾಲೆ ನಡೀತಾ ಇರ್ತೀವಿ; ಕಾಲಿಗೆ ಬಾಯಾಗ ಅದ್ನ ಹೇಳ್ಬಾರ್ದು, ಅದು ಹತ್ತಿಬಿಡ್ತದೆ. ಏನ್ ಮಾಡ್ತೀವಿ ಹೇಳು?'

ಇವರು ಗುಮ್ಮನಗುಸಕನಂತೆ ಇದ್ದರು.

'ನಾನೇ ಹೇಳ್ತೀನಿ ಕೇಳು, ಕಾಲು ತೊಳ್ಕಂಡು ಮನೆ ಒಳಕ್ಕೆ ಹೋಗ್ತೀವಿ. ಹೌದು ತಾನೆ? ಹೂಂ ಅನ್ನು!'

'ಹೂಂ!'

'ಅದು ಬಿಟ್ಟು ಯಾರಾದ್ರೂ ಕಾಲು ಕತ್ತರಿಸಿ ಹಾಕ್ತಾರ? ಇಲ್ಲ ತಾನೆ!'

'ಇಲ್ಲ!'

'ಇದಪ್ಪ ಸಂಸಾರಸ್ಥನ ಮಾತು. ಹೋಗು, ಅವಳೇನೂ ಕಮ್ಮಿ ಕೊರಗಿಲ್ಲ' ಎಂದು ಸುಬ್ಬಮ್ಮ ಕುಟಾಣಿ ಕೆಲಸ ಮುಂದುವರಿಸಿದಳು.

ಇವರು ಒಳಗೆ ಬಂದರು.

ನಾನು ಅವರ ಸಂಗಡ ನಡೆದೆ.

***

ಮೊದಮೊದಲು ಇವರ ಹೆಂಡತಿಯಾಗಿ ಬಂದಾಗ ಇದ್ದ ನಾಚಿಕೆ ಅಂಜಿಕೆಗೂ ಈಗ ಹುಟ್ಟಿರುವ ನಾಚಿಕೆ ಅಂಜಿಕೆಗೂ ಫರ್ಕು ಇಲ್ಲವೆ!

ತಿಳಿದವರು ಹೇಳಿಲ್ಲವೆ: ಕಾಲ ಎಂತಹ ಗಾಯಕ್ಕೂ ಮುಲಾಮು ಎಂದು.

ಒಮ್ಮೆ ಅಂಜಿಕೆಯಿಂದಲೆ ಪಿಸುಗುಟ್ಟಿದೆ.

'ಹೇಗೂ ಹೊಸೂರಿನಲ್ಲಿ ನಮ್ಮ ವರ್ತನೆಯ ಮನೆಗಳಿವೆ. ಹೂ ಮಾರುಕಟ್ಟೆ ಇರುವುದೂ ಕೂಡ ಅಲ್ಲಿಯೆ. ನಾವೇ ಯಾಕೆ ಅಲ್ಲಿಗೆ ಹೋಗಿ ವಾಸಕ್ಕೆ ನಿಲ್ಲಬಾರದು? ಇನ್ನೂ ಹೊಸ ಹೊಸ ವರ್ತನೆಗೆ ಮನೆಗಳು ಸಿಗಬಹುದು.'

ಒಪ್ಪೊಲ್ಲ ಎಂದುಕೊಂಡಿದ್ದೆ. ಆಶ್ಚರ್ಯ ಆಯಿತು.

***

ಮೊದಲು ಕೋಟೆ ಮಾರಿಯಮ್ಮ ಬೀದಿಯಲ್ಲಿ ಸಣ್ಣಮನೆ ಮಾಡಿದರು. ಅಲ್ಲಿ ಹೆಚ್ಚು ದಿನ ಉಳಿಯಲಿಲ್ಲ. ಕಾಲೇಜು ಹುಡುಗರು ಆ ಬೀದಿಯಲ್ಲಿ ಮನೆ ಮಾಡಿಕೊಂಡಿದ್ದರು. ಇವರಿಗೆ ಅವರನ್ನು ಕಂಡರೆ ಕೆಂಡದಂತ ಕೋಪ. ಸ್ವಲ್ಪ ದಿನಗಳಲ್ಲಿಯೆ ಚರ್ಚ್ ರೋಡಿನಲ್ಲಿ ಒಳ್ಳೆಯ ಮನೆ ಸಿಕ್ಕಿ ಅಲ್ಲಿಗೆ ಬದಲಾದೆವು. ಮನೆ ಮುಂದೆ ದೊಡ್ಡ ತುಳಸೀಕಟ್ಟೆ ಇತ್ತು. ಅದನ್ನು ನೋಡಿದಾಗೆಲ್ಲಾ ಮನಸ್ಸಿಗೆ ಎಂತದೋ ಸಮಾಧಾನ ಆಗುತ್ತಿತ್ತು. ಒಮ್ಮೊಮ್ಮೆ ಅದರ ಅಡಿ ಕುಳಿತು ಕಣ್ಣು ಮುಚ್ಚಿ ಧ್ಯಾನ ಮಾಡ್ತಿದ್ದೆ. ಆಗಂತೂ ಏನೋ ತೊಳೆದು ಸ್ವಚ್ಛವಾದ ಭಾವ ಒಳಗಿನಿಂದ ಜಿನುಗುತ್ತಿತ್ತು.

ಈ ಅವಧಿಯಲ್ಲೇ ಲಲಿತ ನನ್ನ ಹೊಟ್ಟೆಯಲ್ಲಿ ಬೆಳೆದದ್ದು. ಇವರು ಹೂ ವ್ಯವಹಾರ ಅಲ್ಲದೆ ಚೀಟಿ ವ್ಯವಹಾರ ಕೂಡ ಆರಂಭಿಸಿದರು. ಇನ್ನು ಏನೇನೋ ವ್ಯವಹಾರ ಇದ್ದ ಹಾಗೆ ಇತ್ತು. ನಾನಂತೂ ಅದರ ಬಗ್ಗೆ ಎಂದೂ ಏನೂ ಕೇಳುತ್ತಿರಲಿಲ್ಲ.

ಲಲಿತ ಹುಟ್ಟಿದಾಗ ಬಾಣಂತನದ ಚಾಕರಿಗೆ ಒಬ್ಬ ಕೆಲಸದವಳನ್ನು ಇವರು ಗೊತ್ತು ಮಾಡಿದರು. ವರ್ಷ ಆದ ಮೇಲೆ ನಾನೆ ಸಂಭಾಳಿಸುವುದು ಅಭ್ಯಾಸ ಆಗಿ, ಕೆಲಸದವಳು ಬರುವುದು ನಿಂತಿತು.

ಇವರಿಗೆ ಲಲಿತಳನ್ನು ಕಂಡರೆ ತುಂಬಾ ಮುಚ್ಚಟೆ. ಅವಳು ಹುಟ್ಟಿದ ಗಳಿಗೆ ನಾನು ಹಣ ಕಾಣುವಂತಾದೆ ಎಂದು ಆಗಾಗ ಹೇಳುತ್ತಿದ್ದರು. ನಾವಿರುವ ಚರ್ಚ್ ರೋಡಿನಲ್ಲಿಯೇ ನಮಗೊಂದು ಘರಮಾಯಿಷಿ ಮನೆ ಕೊಳ್ಳಲು ಸಿಕ್ಕಿತು. ಅಲ್ಲಿಂದ ಮುಂದೆ ದಿನಗಳು ತುಂಬಾ ಸುಖಮಯ ಅನಿಸುತಿತ್ತು. ಈ ಮನೆಗೆ ಹೊಂದಿಕೊಂಡಂತೆ ಖಾಲಿ ಸೈಟ್ ಒಂದು ಒದಗಿ ಅದನ್ನೂ ಇವರು ಖರೀದಿಗೆ ಮಾಡಿಕೊಂಡರು.

ಅದೊಮ್ಮೆ ಡಿಸೆಂಬರ್ ಚಳಿಗಾಲ. ಇವರು ಬೆಳ್ಳಂಬೆಳಿಗ್ಗೆ ಬೈಕ್ ಹತ್ತಿ ಮಾರ್ಕೆಟ್ ಕಡೆ ಹೋದರು. ಈಗ ಅಲ್ಲಿ ಇವರದು ಹೂ ಅಂಗಡಿ ಕೂಡ ಇತ್ತು. ಅದಕ್ಕೆ ಲಲಿತಳ ಹೆಸರೇ ಇಟ್ಟಿದ್ದರು. ಒಂದು ಕ್ಷಣ ಮಂಜು ಇವರ ಕಣ್ಣನ್ನು ಮಸುಕುಗೊಳಿಸಿತು. ಅಷ್ಟೇ. ಲಾರಿಯೊಂದು ಇವರನ್ನು ಜಜ್ಜಿ ಹಾಕಿತ್ತು. ಲಲಿತ ಆಗ ಕ್ರಿಶ್ಚಿಯನ್ ಶಾಲೆಯಲ್ಲಿ ಓದುತ್ತಿದ್ದಳು.

***

ಕಾಲೇಜು ಕಲಿತ ಲಲಿತ ಈ ಶ್ರೀಧರನನ್ನು ಇಷ್ಟಪಟ್ಟಳು. ನನಗಾದರೂ ಯಾರಿದ್ದರು? ಗುದ್ದಾಡಲು ತಾಕತ್ತೂ ಇಲ್ಲ. ಒಪ್ಪಿಕೊಂಡೆ. ಮೊದಲ ಎರಡು ದೀಪಾವಳಿಗೆ ನಮ್ಮಲ್ಲಿಗೆ ಬಂದಿದ್ದ ಇವನು ಒಳ್ಳೆಯ ಹುಡುಗ ಎನಿಸಿದ್ದ. ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಕೆಲಸ. ನಯ ವಿನಯ ಇರುವವನಂತೆ ಕಂಡ. ನನ್ನ ಕಂಡಾಗಲೆಲ್ಲಾ ಅಷ್ಟು ದೂರದಲ್ಲಿ ನಿಂತೇ ನೆಲ ಮುಟ್ಟಿ ನಮಸ್ಕರಿಸುತ್ತಿದ್ದ. ಇವಳಂತೆ ಅವನೂ ನನ್ನನ್ನು 'ಅಮ್ಮಾ' ಅಂತಲೇ ಕರೆಯುತ್ತಿದ್ದ.

ಈಗ ಆಫೀಸಿನಲ್ಲಿ ಯಾರ ಜೊತೆಯೋ

***

ಲಲಿತ ರಾತ್ರಿ ಊಟ ಬೇಡ ಎಂದಳು.

ಗಂಗಮ್ಮ ಬಿಡಲಿಲ್ಲ. ಅದಾಗ್ಯೂ ಲಲಿತ ತಿಂದದ್ದು ಕ್ವಚಿತ್ತೆ. ಹಾಲಾದರೂ ಕುಡಿ ಎಂದು ಒಂದು ಲೋಟ ಬಿಸಿ ಬಿಸಿ ತಂದುಕೊಟ್ಟಳು. ಸಾವಕಾಶವಾಗಿ ಗುಟುಕರಿಸುತ್ತಿದ್ದ ಮಗಳನ್ನು ನೋಡಿ ಗಂಗಮ್ಮ ಹೇಳಿದಳು:

'ಲಲೀ, ಒಂದು ಮಾತು ಹೇಳಲಾ?'

ಲಲಿತ ಅಮ್ಮನ ಮುಖ ನೋಡಿದಳು.

'ನೋಡು, ನಾವು ರಸ್ತೆಯಲ್ಲಿ ನಡೆಯುವಾಗ ಕಾಲಿಗೆ ಬಾಯಲ್ಲಿ ಅದನ್ನು ಹೇಳಬಾರದು; ಅದು ಹತ್ತಿಬಿಡುತ್ತೆ. ನಾವು ಏನ್ ಮಾಡ್ತೀವಿ ಹೇಳು? ಕಾಲು ಕತ್ತರಿಸಿ ಹಾಕ್ತೀವಾ? ಇಲ್ಲವಲ್ಲ! ಕಾಲು ತೊಳೆದುಕೊಂಡು ಮನೆ ಒಳಗೆ ಬರ್ತೀವಲ್ವಾ?'

ಲಲಿತ ಬಿಟ್ಟ ಕಣ್ಣು ಬಿಟ್ಟಂತೆ ಅಮ್ಮನನ್ನು ನೋಡುತ್ತ ಇದ್ದಳು.

'ಇಷ್ಟೇ ತಾಯಿ ನಾನು ಹೇಳೋದು. ನೀನು ಜಾಣೆಯಾದರೆ ಅರ್ಥ ಮಾಡಿಕೋ.'

***

ಮಾರನೆಯ ದಿನ ಮಗಳು ಅಮ್ಮನನ್ನು ಕೇಳಿದಳು.

'ತಪ್ಪಾಯ್ತು ಅಂಥ ಎಕ್ಸ್‌ಕ್ಯೂಸ್ ಕೇಳಬಹುದಿತ್ತು. ಯಾಕೆ ಕೇಳಲಿಲ್ಲ?'

'ನಾಚಿಕೆ ಇರುತ್ತಲ್ವೇನೆ ಎಂತಹವರಿಗೂ ಇಂತಹ ಸಂದರ್ಭ ನಾಚಿಕೆ ಹುಟ್ಟಿಸಿ ಬಿಡುತ್ತೆ. ಅವನೂ ಒಳಗೆ ನೊಂದಿರ್ತಾನೆ. ಹೋಗಿ ನೀನೆ ಮಾತಾಡಿಸು. ಗೋಳೋ ಅಂಥ ಅತ್ತು ನಿನ್ನನ್ನು ಅಪ್ಪಿಕೊಳ್ತಾನೆ.'

ಅಮ್ಮ ನಸುನಕ್ಕಳು.

***

ಇದಾದ ಎರಡನೆಯ ದಿನ ಲಲಿತ ಗಂಗಮ್ಮನಿಗೆ ಫೋನಿನಲ್ಲಿ ಹೇಳಿದಳು:

'… ಥ್ಯಾಂಕ್ಸ್ ಅಮ್ಮಾ… ನೀನು ಹೇಳಿದ್ದು ಸರಿಯಾಯ್ತು. ಶ್ರೀಧರ ತುಂಬಾ ಅಪ್ಸೆಟ್ ಆಗಿಬಿಟ್ಟಿದ್ದ. ನಾನು ಜಗಳ ಮಾಡಿಕೊಂಡು ಬಂದ ಮೇಲೆ ಸಾಯಬೇಕು ಅಂಥ ಯೋಚನೆ ಮಾಡ್ತಾ ಇದ್ದನಂತೆ. ನಾನು ಇನ್‌ಟೈಂಗೆ ಬಂದೆ ನೋಡು. ನೀನು ಹೇಳಿದ ಹಾಗೆ ಅವನು ನನ್ನ ತಬ್ಬಿಕೊಂಡು ಗೋಳೋ ಅಂಥ ಅತ್ತುಬಿಟ್ಟ.

ಇನ್ನೊಂದು ವಿಷಯ. ಶ್ರೀಧರ ಬೇನಾಮಿ ಹೆಸರಿನಲ್ಲಿ ಸಿಕ್ಕಾಪಟ್ಟೆ ಪ್ರಾಪರ್ಟಿ ಮಾಡಿ ಇಟ್ಟಿದ್ದಾನೆ. ನನ್ನ ಹತ್ತಿರ ಈ ವಿಷಯ ಮುಚ್ಚಿಟ್ಟಿದ್ದ. ಈಗ ಇವೆಲ್ಲಾ ಹೇಳಿಕೊಂಡ. 'ಇಷ್ಟೆಲ್ಲಾ ಮಾಡಿರೋದು ಯಾರಿಗಾಗಿ ಹೇಳು? ನಮಗೆ, ಮುಂದೆ ಹುಟ್ಟುವ ನಮ್ಮ ಮಕ್ಕಳಿಗೆ ತಾನೆ' ಅಂತ ತುಂಬಾ ಬೇಸರ ಮಾಡಿಕೊಂಡುಬಿಟ್ಟ. ಒಂದು ಕ್ಷಣ ನನಗೇ ಅಯ್ಯೋ ಅನಿಸಿಬಿಡ್ತು.

ಥ್ಯಾಂಕ್ಸ್ ಗಾಡ್! ನೀನು ಇನ್‌ಟೈಂಗೆ ನನ್ನನ್ನು ಎಜುಕೇಟ್ ಮಾಡದೆ ಹೋಗಿದ್ದರೆ ಏನೆಲ್ಲಾ ಆಗಿಹೋಗೋದು!'

ಮಗಳು ಫೋನ್ ಇಟ್ಟ ಮೇಲೂ ಗಂಗಮ್ಮನಿಗೆ ಮಗಳ ಮಾತಿನ ಒಳಾರ್ಥ ಹೊಳೆಯಲು ಸುಮಾರು ಹೊತ್ತು ಹಿಡಿಯಿತು.

ಪ್ರತಿಕ್ರಿಯಿಸಿ: **feedback@sudha.co.in**